ಉಳಿದಂತೆ 69 ಕ್ಷೇತ್ರಗಳ ಸಮಿತಿ ರಚಿಸಲು ಪರಿಶೀಲಿಸಲಾಗುತ್ತಿದ್ದು, ಮಿಕ್ಕ 50 ಕ್ಷೇತ್ರಗಳಿಗೆ ಸಮಿತಿ ರಚಿಸಲು ಪ್ರಸ್ತಾವನೆಗಳು ಬಂದ ನಂತರ, ಪರಿಶೀಲಿಸಲಾಗುವುದು

ಆ) ಪ್ರಶ್ನೆ 'ಅ' ರಲ್ಲಿ ಉತ್ತರ ನೀಡಲಾಗಿದೆ

ಇ) ಅಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ

699 (722) ಶ್ರೀ ನರಸಿಂಹಸ್ವಾಮಿ ಜೆ (ದೊಡ್ಡಬಳ್ಳಾಪುರ) – ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸಕ್ತ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ಆರಾಧನಾ ಸಮಿತಿಗಳನ್ನು ರಚಿಸದೆ ಅನೇಕ ಭಕ್ತಾದಿಗಳಿಗೆ ಕೊಟ್ಟಿರುವ ಆಶ್ವಾಸನೆಗಳನ್ನು ಪೂರೈಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಬಂದಿದ್ದಲ್ಲಿ, ಸಮಿತಿಗಳ ರಚನೆಗೆ ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಬಿ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) ಒಟ್ಟು 224 ವಿಧಾನಸಭಾ ಕ್ಷೇತ್ರಗಳಲ್ಲಿ ಈವರೆವಿಗೆ 105 ವಿಧಾನಸಭಾ ಕ್ಷೇತ್ರಗಳ ಆರಾಧನಾ ಸಮಿತಿಗಳನ್ನು ರಚಿಸಲಾಗುತ್ತಿದೆ

ಆ) 'ಈಗಾಗಲೇ 105 ವಿಧಾನ ಸಭಾ ಕ್ಷೇತ್ರಗಳ ಆರಾಧನಾ ಸಮಿತಿ ರಚಿಸಿದ್ದು, 69 ಕ್ಷೇತ್ರಗಳ ಸಮಿತಿಗಳನ್ನು ರಚಿಸಲು ಪರಿಶೀಲಿಸಲಾಗುತ್ತಿದೆ ಉಳಿದ 50 ಕ್ಷೇತ್ರಗಳ ನಮಿತಿ ರಚಿಸಲು ಪ್ರಸ್ತಾವನೆ ನಿರೀಕ್ಷಿಸಲಾಗುತ್ತಿದೆ

700 (923) ಶ್ರೀ ಪದ್ಮನಾಭ ಕೊಟ್ಟಾರಿ ಕೆ (ವಿಟ್ಲ) – ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರು ಉಪಯೋಗಿಸುವ ಸೀಮೆಎಣ್ಣೆ ಪಂಪ್‌ಸೆಟ್‌ಗಳಿಗೆ ಸಬ್ಸಿಡಿ ದರದಲ್ಲಿ ಸೀಮೆಎಣ್ಣೆ ಒದಗಿಸಿಕೊಡುವ ಕಾರ್ಯಕ್ರಮ ಪ್ರಸ್ತುತ ಜಾರಿಯಲ್ಲಿದೆಯೇ ,

ಆ) ಇಲ್ಲವಾದಲ್ಲಿ, ಸ್ಥಗಿತಗೊಳಿಸಲು ಕಾರಣವೇನು ,

ಇ) ವಿದ್ಯುತ್ ಕಡಿತ ಮತ್ತು ಅಭಾವ ಮತ್ತಿತರ ಕಾರಣಗಳಿಂದಾಗಿ ಕೃಷಿ ಕಾರ್ಯಚಟುವಟಿಕೆಗಳಿಗೆ ಸಹಾಯವಾಗುವಂತೆ ಸೀಮೆಎಣ್ಣೆ ಪಂಪ್‌ಸೆಟ್‌ಗಳನ್ನು

ಬಳಕೆ ಮಾಡಿ ವ್ಯವಸಾಯ ಮಾಡಲು ಅನುಕೂಲವಾಗುವಂತೆ ಸಬ್ಸಿಡಿ ದರದಲ್ಲಿ ಸೀಮೆಎಣ್ಣೆಯನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು)

ಅ) ಕೃಷಿ ಇಲಾಖೆಯಲ್ಲಿ ಇಂತಹ ಯಾವುದೇ ಕಾರ್ಯಕ್ರಮ ಈವರೆಗೆ ಜಾರಿಯಲ್ಲಿರುವುದಿಲ್ಲ

ಆ) ಉದ್ಭವಿಸುವುದಿಲ್ಲ

ಇ) ಈ ವಿಷಯವು ಸದ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿಲ್ಲ

701 (982) ಶ್ರೀ ಪದ್ಮನಾಭ ಕೊಟ್ಟಾರಿ ಕೆ (ವಿಟ್ಲ) – ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಡುಗೆ ಅನಿಲ ಸರಬರಾಜಿನ ಕೊರತೆ ಪ್ರಮಾಣ ಎಷ್ಟು, ಅದನ್ನು ಪರಿಹರಿಸಲು ಸರ್ಕಾರದ ಕ್ರಮಗಳೇನು ,

ಆ) ರಾಜ್ಯಕ್ಕೆ ಪ್ರಸ್ತುತ ಪಡಿಸಿರುವ ಅಡುಗೆ ಅನಿಲದ ಪ್ರಮಾಣ ಮತ್ತು ಅದರ ಸರಬರಾಜಿನ ವಿವರಗಳೇನು ?

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು)

ಅ) ಕೇಂದ್ರ ಸರ್ಕಾರದ ಸ್ವಾಮ್ಯದ ತೈಲ ಕಂಪನಿಗಳಾದ ಇಂಡಿಯನ್ ಆಯಿಲ್ ಕಾರ್ಪೊರೇಷನ್, ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಮತ್ತು ಹಿಂದುಸ್ಥಾನ್ ಪೆಟ್ರೋಲಿಯಂ ಕಾರ್ಪೊರೇಷನ್‌ಗಳಿಂದ ರಾಜ್ಯದಾದ್ಯಂತ ಅಡುಗೆ ಅನಿಲದ ಸಿಲಿಂಡರ್‌ಗಳು ಸರಬರಾಜಾಗುತ್ತಿವೆ ದಿನಾಂಕ 1 4 2006 ರಿಂದ 31 1 2007 ರ ಅಂತ್ಯಕ್ಕೆ ಇಂಡಿಯನ್ ಆಯಿಲ್ ಕಾರ್ಪೋರೇಷನ್ ರವರಿಂದ ಸಂಚಿತ ಒಟ್ಟು 13741268 ಅನಿಲ ಸಿಲಿಂಡರ್‌ಗಳ ಬೇಡಿಕೆ ಇದ್ದು 13715423 ಅನಿಲ ಸಿಲಿಂಡರ್‌ಗಳು ಸರಬರಾಜಾಗಿದ್ದು, ಒಟ್ಟು 25 845 ಅನಿಲ ಸಿಲಿಂಡರ್‌ಗಳ ಕೊರತೆಯಾಗಿರುತ್ತದೆ ಒಟ್ಟು ಹತ್ತು ತಿಂಗಳ ಅವಧಿಯ ಅಂತ್ಯಕ್ಕೆ ಹೆಚ್ ಪಿ ಸಿ ಮತ್ತು ಬಿ ಪಿ ಸಿ ತೈಲ ಕಂಪನಿಗಳಿಂದ ಬೇಡಿಕೆ ಮೀರಿ ಅನಿಲ ಸರಬರಾಜಾಗಿರುತ್ತದೆ ಆದರೆ, ಬಿ ಪಿ ಸಿ ತೈಲ ಕಂಪನಿಗಳಿಂದ ಸೆಪ್ಟೆಂಬರ್ ಹಾಗೂ ಅಕ್ಟೋಬರ್ 2006ರ ಮಾಹೆಗಳಲ್ಲಿ ಒಟ್ಟು 1595071 ಅನಿಲ ಸಿಲಿಂಡರ್‌ಗಳ ಬೇಡಿಕೆ ಇದ್ದು 1505915 ಸಿಲಿಂಡರ್ ಸರಬರಾಜು ಮಾಡಿದ್ದು